## ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ

**<u>ಫೌಜುದಾರಿ ಪ್ರಕರಣ ಸಂಖ್ಯೆ : 25/2025</u>**

**ಚಾ.ಸಾಃ 7, ಫ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ಮಹ್ಮದ್ ಯಾಸಿನ್ |
| ತಂದೆಯ ಹೆಸರು | ಜಕ್ರಿಯಾ ಶೇಖ್ |
| ವಯಸ್ಸು | 39 ವರ್ಷಗಳು |
| ಉದ್ಯೋಗ | ಚಾಲಕ |
| ವಾಸ್ತವ್ಯ | ಸರಳಗಿ |

**<u>ಸಾಕ್ಷಿಯನ್ನು ದಿನಾಂಕಃ 12-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎಪಿಪಿಯವರಿಂದ,</u>**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿದ್ದೇನೆ.

ದಿನಾಂಕ 28-12-2024 ರಂದು ಮಧ್ಯಾಹ್ನ 12-00 ರಿಂದ 01-00 ಗಂಟೆ ಸಮಯದಲ್ಲಿ ಉಪ್ಪೋಣಿಯ ತೂಗುಸೇತುವೆಯ ಹತ್ತಿರದ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ನಿಂತುಕೊಂಡಿದೆ. ಆ ವೇಳೆಗೆ ಆರೋಪಿ ಹೊನ್ನಾವರದಿಂದ ಗೇರುಸೊಪ್ಪ ಕಡೆಗೆ ಆಟೋ ಚಲಾಯಿಸಿಕೊಂಡು ಬರುತ್ತಿದ್ದ. ಸದರಿ ಉಪ್ಪೋಣಿ ಬ್ರಿಡ್ಜ ಹತ್ತಿರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಸಣ್ಣಮಗು ರಸ್ತೆಗೆ ಅಡ್ಡಬಂತು. ಆಗ ಆರೋಪಿ ಆಟೋಗೆ ಬ್ರೇಕ್ ಹಾಕಿದ. ತಕ್ಷಣ ಆಟೋ ಪಲ್ಟಿಯಾಯಿತು. ತಕ್ಷಣ ನಾನು ಮತ್ತು ಸ್ಥಳದಲ್ಲಿದ್ದವರು ಆಟೋ ಎತ್ತಿ ನೋಡಲಾಗಿ ಆಟೋದಲ್ಲಿ ಪ್ರಯಾಣಿಸುತ್ತಿದ್ದವರ ಪೈಕಿ ಒಂದು ಮಗು ಇದ್ದು ಪಲ್ಟಿಯಾಗಿದ್ದ ಆಟೋ ಆ ಮಗುವಿನ ಮೇಲೆ ಬಿದ್ದಿತ್ತು. ಆಟೋವನ್ನು ಎತ್ತಿ ಮಗುವನ್ನು ಎತ್ತಿ ನೋಡಲಾಗಿ ಮಗುವಿಗೆ ಕಿವಿಯ ಹತ್ತಿರ, ಹಣೆಯ ಮೇಲೆ ಮತ್ತು ಮೈಮೇಲೆ ಗಾಯವಾಗಿದ್ದವು. ನಂತರ ಆ ಮಗುವನ್ನು ಆಟೋದಲ್ಲಿದ್ದವರ ಜೊತೆಯಲ್ಲಿ ಆಸ್ಪತ್ರೆಗೆ ಕಳುಹಿಸಿರುತ್ತೇವೆ. ತದನಂತರ ಆ ಮಗು ಮೃತಪಟ್ಟಿರುವುದಾಗಿ ಗೊತ್ತಾಯಿತು. ಆಟೋ ಚಾಲಕ ಆಟೋವನ್ನು ವೇಗವಾಗಿ ಚಲಾಯಿಸಿಕೊಂಡು ಬರುತ್ತಿದ್ದು ಮಗು ಅಡ್ಡ ಬಂದಾಗ ಬ್ರೇಕ್ ಹಾಕಿದ್ದರಿಂದ ಅಪಘಾತವಾಯಿತು.

ದಿನಾಕ 03-01-2025 ರಂದು ಸಂಜೆ 05-30 ರ ಸಮಯದಲ್ಲಿ ಸದರಿ ಅಪಘಾತ ಸ್ಥಳಕ್ಕೆ ಪೋಲೀಸರು ಬಂದಿದ್ದು ನಾನು ತೋರಿಸಿದ ಅಪಘಾತ ಸ್ಥಳದಲ್ಲಿ ಪೋಲೀಸರು ಚಾಸಾ-2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ, ಒಂದು ಕಚ್ಚಾ ನಕಾಶೆ ತಯಾರಿಸಿ, ಸದರಿ ಸ್ಥಳದಲ್ಲಿ ಇದ್ದ ಆಟೋದ ಬಳಿ ನಿಲ್ಲಿಸಿ ಸುಮಾರು 5 ಫೋಟೋಗಳನ್ನು ತೆಗೆದಿರುತ್ತಾರೆ. ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. 5 ಫೋಟೋಗಳನ್ನು ನಿಪಿ-3 ರಿಂದ 7 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ</u>**

ಅಪಘಾತ ಆದ ಸ್ಥಳ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಆಟೋ ಅಜಮಾಸು 30 ರಿಂದ 40 ಕಿಲೋಮೀಟರ್ ವೇಗದಲ್ಲಿ ಹೋಗುತ್ತದೆ ಎಂದರೆ ಸರಿ. ಆಟೋ ಚಾಲಕ ತನ್ನ ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದರು ಎಂದರೆ ಸರಿ. ಮಗು ರಾಷ್ಟ್ರೀಯ ಹೆದ್ದಾರಿಗೆ ಏಕಾ ಏಕಿ ಅಡ್ಡಬಂದಿರುತ್ತದೆ ಎಂದರೆ ಸರಿ. ಮಗುವಿಗೆ ಅಪಘಾತ ಆಗುವುದನ್ನು ತಪ್ಪಿಸಲು ಆರೋಪಿ ಬ್ರೇಕ್ ಹಾಕಿರುತ್ತಾರೆ ಎಂದರೆ ಸರಿ. ರಸ್ತೆಗೆ ಮಗು ಅಡ್ಡ ಬರದಿದ್ದರೆ ಸದರಿ ಅಪಘಾತ ಆಗುತ್ತಿರಲಿಲ್ಲ.

ಸ್ಥಳದಲ್ಲಿ ಪೋಲೀಸರು ಕೈಯಲ್ಲಿ ಬರೆದು ಪಂಚನಾಮೆಗೆ ಸಹಿ ತೆಗೆದುಕೊಂಡಿರುತ್ತಾರೆ. ಪೋಲೀಸ್ ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**